



ವಾರದ ಪತ್ರ

## ಆದರ್ಶದ ಹಾದಿಯಲ್ಲಿ ರುಕ್ಕು

ಸ್ಟಾರ್ ಸುವರ್ಣದ 'ರುಕ್ಕು'ನಲ್ಲಿ ಹೆಣ್ಣುಮಕ್ಕಳು ಯಾವುದರಲ್ಲಿಯೂ ಕಡಿಮೆ ಇಲ್ಲವೆಂಬ ಮಹತ್ವವನ್ನು ಬಿತ್ತರಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಕಥಾನಾಯಕಿ ರುಕ್ಕು ಮನೆಗೆ ಹಿರಿಯ ಮಗಳಾಗಿ ವ್ಯವಸಾಯದಲ್ಲಿ ನೇಗಿಲಿಗೆ ಹೆಗಲು ಕೊಟ್ಟು ದುಡಿಯುತ್ತಾಳೆ. ಜವಾಬ್ದಾರಿಯನ್ನು ಅಮ್ಮನೊಡನೆ ಹೊತ್ತಿದ್ದಾಳೆ. ಪತಿ ವಿಹೀನಳಾದ ರುಕ್ಕುವಿನ ತಂಗಿ ಭಾರತಿ ತವರು ಸೇರಿದರೂ ಕುಟುಂಬಕ್ಕೆ ಭಾರವಾಗದೆ ಹೊಲಿಗೆ ಕೆಲಸದಲ್ಲಿ ಆಕೆಯನ್ನು ತೊಡಗಿಸಿಕೊಂಡು ಸ್ವಾಭಿಮಾನದ ಬದುಕು ರೂಪಿಸಿಕೊಡುವುದು. ಕಿರಿಯ ಮಗಳು ರಾಧಿಕಾಳ ಹೆಚ್ಚಿನ ಓದಿನ ಕಡೆ ಗಮನ ಹರಿಸಿರುವುದು ಗಮನಾರ್ಹ.

ಮನೆಯ ಮಗ ಉಂಡಾಡಿಗುಂಡನಾಗಿ ಮೋಜಿಗಾಗಿ ಅಕ್ಕನ ಹಣಕ್ಕೆ ಕೈಚಾಚುವುದು ವಿಪರ್ಯಾಸ. ಇತರೆ ಕಥೆಗಳಂತೆ ಪ್ರೀತಿ– ಪ್ರೇಮದೊಂದಿಗೆ ತ್ಯಾಗ, ಹೊಟ್ಟೆಕಿಚ್ಚು ಮೊದಲಾದ ಸಿದ್ಧ ಸೂತ್ರ ತಳುಕು ಹಾಕಿಕೊಂಡಿರುವುದು ಸಾಮಾನ್ಯವೆಂದೆನಿಸಿದರೂ ವಿಭಿನ್ನತೆಯನ್ನೂ ಬಿಂಬಿಸಲಾಗಿದೆ. ಗ್ರಾಮ್ಯ ಭಾಷೆಯ ಸೊಗಡು ವಿಜೃಂಭಿಸಿದೆ.

ಬಂಗಾರಮ್ಮನ ದರ್ಪದ ಬದುಕಿನ ನಡುವೆ ಆಕೆಯ ಅಂತರ್ಯದಿಂದ ಹೊರಹೊಮ್ಮುವ ಸತ್ವ, ನಿಷ್ಠೆಯ ನುಡಿಗಳು ಮೆಚ್ಚತಕ್ಕದ್ದು. ಕಥಾವಸ್ತುವಿನಲ್ಲಿ ಹೆಣ್ಣುಮಕ್ಕಳಿಗೆ ಪ್ರಾಶಸ್ತ್ಯ ನೀಡಿರುವುದು ನಿಜಕ್ಕೂ ಹೆಗ್ಗಳಿಕೆಯ ವಿಷಯ. ಸಮಗ್ರವಾಗಿ ನೋಡಿದರೆ 'ರುಕ್ಕು' ಆದರ್ಶದಿಂದ ವೀಕ್ಷಕರನ್ನು ಮುಟ್ಟುವುದರಲ್ಲಿ ಸಫಲತೆಯ ಕಾಣುತ್ತದೆ ಎಂದೆನಿಸುತ್ತದೆ.

–ಪೂರ್ಣಿಮಾ ಮೂರ್ತಿ, ಬೆಂಗಳೂರು

## ಸೂತಕದ ಅಂಟು

ಕಲರ್ಸ್ ಕನ್ನಡದ 'ಅನುಬಂಧ ಅವಾರ್ಡ್' ಕಾರ್ಯಕ್ರಮದಲ್ಲಿ 'ಜನ ಮೆಚ್ಚಿದ ನಾಯಕ ಕನ್ನಡತಿಯ ಹರ್ಷ, ಮನೆ ಮೆಚ್ಚಿನ ಮಗನಾಗಿ ಹರ್ಷ, ಉತ್ತಮ ಸಂಭಾಷಣೆ ಕನ್ನಡತಿಯ ಮಂಜುನಾಥ ಭಟ್, ಜನ ಮೆಚ್ಚಿದ ನಾಯಕಿ ಭುವನೇಶ್ವರಿ, ಉತ್ತಮ ಛಾಯಾಗ್ರಹಣ, ಉತ್ತಮ ನಿರ್ದೇಶಕ ಯಶ್ವಂತ್....' ಹೀಗೆ ಗೆಲುವಿನ ಓಟ ಸಾಗುತ್ತಲೇ ಇದೆ.

ಹಾಗೆಯೇ ಕನ್ನಡದ ಬೆಸ್ಟ್ ಸೀರಿಯಲ್ ಯಾವುದೆಂದು ಗೂಗಲ್ ಮಾಡಿದರೆ 'ಕನ್ನಡತಿ' ಎನ್ನುತದಂತೆ ಅದು. ನನ್ನ ಮೊದಲ ಆಯ್ಕೆ ಕೂಡ ಇದೇ. ಇದರಲ್ಲಿ ಮೊನ್ನೆ ಒಂದು ತಪ್ಪು ನಡೆದು ಹೋಯ್ತು. ಅದೇನೆಂದರೆ, ವರುಧಿನಿಗೆ ಸೆರೆಮನೆಯಿಂದ ಬೇಲ್ ಮೇಲೆ ಬಿಡುಗಡೆ ಆಗುತ್ತದೆಂದು ಭುವಿ ಹಾಗೂ ಹರ್ಷ ಕೋರ್ಟಿಗೆ ಹೋಗುವಾಗ ದೇವಾಲಯದ ಹತ್ತಿರ ಕಾರು ನಿಲ್ಲಿಸುತ್ತಾರೆ. ನನಗೆ ಸೂತಕ ಇದೆ ನೀವೇ ಹೋಗಿ ವರುಧಿನಿ ಹೆಸರಲ್ಲಿ ಅರ್ಚನೆ ಮಾಡಿಸಿ ಎಂದು ಹೇಳ್ತಾ ವರುಧಿನಿಯದು 'ಮೀನ ರಾಶಿ ರೋಹಿಣಿ ನಕ್ಷತ್ರ' ಎಂದು ಭುವಿ ಹರ್ಷನಿಗೆ ಹೇಳ್ತಾಳೆ. ರೋಹಿಣಿ ನಕ್ಷತ್ರ ಮೀನ ರಾಶಿಯಲ್ಲಿ ಬರೋದಿಲ್ಲ. ಅದು ವರುಧಿನಿ... ಮೊದಲ ಅಕ್ಷರ 'ವ' ಎರಡನೇ ಪಾದ ವೃಷಭ ರಾಶಿ ಆಗುತ್ತದೆ.

ಮಾತ್ರವಲ್ಲ ಮೌಢ್ಯದ ವಿರುದ್ಧ ಸಮರ ಸಾರುವ ಕನ್ನಡತಿಗೆ 'ಸೂತಕ' ಅಂಟು ಬೇಕಿತ್ತೆ?

–ರಘುನಾಥರಾವ್ ತಾಪ್ಸೆ, ದಾವಣಗೆರೆ

## ಸಾರ್ಥಕ ಸಂದೇಶ

ಹೆತ್ತವರನ್ನು ಯಾವುದೇ ಕಾರಣಕ್ಕೂ ವೃದ್ಧಾಪ್ಯದಲ್ಲಿ ಕಡೆಗಣಿಸಬಾರದು, ತಾವು ತಿನ್ನುವ ಅನ್ನದಲ್ಲಿ ಒಂದು ತುತ್ತು ಹೆತ್ತವರಿಗಿತ್ತರೆ ಅವರ ಹೊಟ್ಟೆಯೂ ತಂಪಾಗಿರುತ್ತದೆ. ಹೆತ್ತಮಕ್ಕಳೇ ಅಪ್ಪ– ಅಮ್ಮನನ್ನು ಹೊರಹಾಕಿದರೂ ಹೆತ್ತ ಕರುಳೆಂದೂ ಮಕ್ಕಳನ್ನು ಶಪಿಸುವುದಿಲ್ಲ. ಮಕ್ಕಳು ಅದನ್ನು ಮರೆತು ಬಿಡುತ್ತಾರೆ. ಆದ್ದರಿಂದ ಮಕ್ಕಳ್ಯಾರೂ ಹೆತ್ತವರನ್ನು ತಮ್ಮಿಂದ ಬೇರೆ ಮಾಡಬಾರದೆಂಬ ಸಂದೇಶವನ್ನು ಝೀ ಕನ್ನಡದ 'ಸತ್ಯ' ಬಿತ್ತರಿಸಿದೆ. ಮಹಿಳಾ ವಿಲನ್‌ಗಳಿಂದ ನಾಯಕ–ನಾಯಕಿಯರನ್ನು ಹಿಂಸಿಸುವ ಕಥೆಗಳನ್ನೇ ಹೊಂದಿರುವ ಬೇರೆ ಧಾರಾವಾಹಿಗಳಿಗಿಂತ ಇದು ಭಿನ್ನವಾಗಿದೆ. ತಮ್ಮ ಅಮೂಲ್ಯ ಸಮಯವಿತ್ತು ನೋಡುವ ವೀಕ್ಷಕರಲ್ಲೂ ಸಾರ್ಥಕತೆ ಮೂಡಿಸುತ್ತದೆ.

–ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ

## ಅಭಿಮಾನಿಗಳು

ಕಲರ್ಸ್ ಕನ್ನಡದ 'ಕನ್ನಡತಿ' ಹೆಚ್ಚು ಜನರ ಮೆಚ್ಚುಗೆ ಗಳಿಸಿದೆ. ಸಾಮಾಜಿಕ ಮಾಧ್ಯಮಗಳಲ್ಲಿ 'ಕನ್ನಡತಿಯ ಅಭಿಮಾನಿಗಳ ಗುಂಪೇ' ಇದೆ. ಒಂದು ಧಾರಾವಾಹಿ ಜನರನ್ನು ಈ ರೀತಿ ಮೋಡಿ ಮಾಡಿರುವುದು ಅಚ್ಚರಿಯ ಸಂಗತಿಯೇ ಸರಿ. ಹಿಂದೆ ಟಿ.ಎನ್. ಸೀತಾರಾಂ ನಿರ್ದೇಶನದ 'ಮಗಳು ಜಾನಕಿ' ಕೂಡ ಜನರಲ್ಲಿ ಇದೇ ರೀತಿಯ ಸಂಚಲನ ಮೂಡಿಸಿತ್ತು.

–ಕೆ.ಎಸ್. ಸವಿತ, ಬೆಂಗಳೂರು

## ಮಂಗಳಗೌರಿಗೆ ಮುಕ್ತಿ ಕೊಡಿ

ಕಲರ್ಸ್‌ನ 'ಮಂಗಳಗೌರಿ'ಯನ್ನು ಅಪರೂಪಕ್ಕೆ ಎಂಬಂತೆ ನೋಡಿದೆ. ಕಥೆ ಹಿಂದೆ ನೋಡಿದಾಗ ಎಲ್ಲಿತ್ತೋ ಈಗಲೂ ಅಲ್ಲೇ ಇದೆ. 'ರೀ ಸ್ವಾಮಿ ಒಂದೇ ಊಟವನ್ನು ಎಷ್ಟು ವರ್ಷ ತಿನ್ನಬಹುದು ಹೇಳಿ? ಪಾತ್ರಗಳು ಚಿರಂಜೀವಿಗಳೇನು..? ಅವರಿಗೆ ವಯಸ್ಸಾಗುವುದೇ ಇಲ್ಲವೆ?'

'ಪುಟ್ಟಗೌರಿ' ಶುರುವಾದಾಗ ಹುಟ್ಟಿದ ನಮ್ಮ ಮೊಮ್ಮಗ ಈಗ ಮೂರನೇ ತರಗತಿ ಮುಗಿಸುತ್ತಿದ್ದಾನೆ. ಬಹುಶಃ ನಮ್ಮ ಮೊಮ್ಮಗನಿಗೆ ಮದುವೆ ಆದರೂ ರಾಜೀವ್ ಮತ್ತು ಸ್ನೇಹ ಇನ್ನೂ ಮದುವೆಗೆ ಕಾಯುತ್ತಿರುತ್ತಾರೆ ಎಂದೆನಿಸುತ್ತದೆ.

ರಾಜೀವನಿಗೆ ತಾನು ಮಂಗಳಗೌರಿಗೆ ತಾಳಿ ಕೊಟ್ಟಿರುವುದು ನೆನಪಾಗುವುದೇ ಇಲ್ಲ. ಮಂಗಳಗೌರಿಯನ್ನು ಕಾಡಲು ಸೌಂದರ್ಯ, ಸ್ನೇಹ ಜೊತೆಗೆ ಮತ್ತೊಂದು ಹೊಸ ಖಳನಾಯಕ ಅಥವಾ ನಾಯಕಿ ಹುಟ್ಟಿಕೊಳ್ಳಬಹುದು.

–ಗಾಯತ್ರಿ, ಬೆಂಗಳೂರು

## ಸುದ್ದಿ ಮುಖ್ಯಾಂಶಗಳು

ಕನ್ನಡ ಸುದ್ದಿ ವಾಹಿನಿಗಳ ಒಂದು ನೋಟ, 'ಪ್ರೈಮ್ ನ್ಯೂಸ್‌ಗೆ ಸ್ವಾಗತ, ಎಲ್ಲಕ್ಕೂ ಮೊದಲು ಇಂದಿನ ಹೆಡ್ಲೈನ್ಸ್ ಕಡೆ ನೋಡಿ ಬಿಡೋಣಾ! ಉತ್ತರಾಖಂಡದ ದುರಂತ, ಕಾಳಿಮಾತೆಯ ಶಾಪಕ್ಕೆ ಜನ ಜೀವನ ಬರ್ಬಾದ್! ರಾಜಾ ಹುಲಿಯ ಆರ್ಭಟಕ್ಕೆ ಟಗರು ಮಟಾಷ್! ದೆಹಲಿಯ ಹೈಕಮಾಂಡ್‌ನಿಂದ ಬುಲಾವ್, ಗೂಳಿ ದೆಹಲಿಗೆ ದೌಡ್! ಶಾಸಕರುಗಳು ತೆಪ್ಪಗೆ ಕೂರಲು ಚಾಣಕ್ಯನ ಖಡಕ್ ಆದೇಶ! ಸದನದಲ್ಲಿ ಮತ್ತೆ ಸದ್ದುಮಾಡಿದ ಸಿದ್ದು! ಮಸೂದೆ ವಿರುದ್ಧ ಟಗರಿನ ಗುಟುರು! ರೈತರ ಜೊತೆ ಗುಡುಗಿದ ಬಂಡೆ! ಸದನದ ಬಾವಿಗಿಳಿದ ಸಾಹುಕಾರ್ ಗರಂ! ಹಳ್ಳಿಹಕ್ಕಿಗೆ ಟಗರು ಮಾತಿನಲ್ಲೇ ಡಿಚ್ಚಿ! ಸರ್ಕಾರದ ನಿಲುವಿಗೆ ಹೆಚ್ಡಿಕೆ ಸಾಥ್! ರಾಜ್ಯದ ಚಿತ್ರಮಂದಿರಗಳಲ್ಲಿ ನೂರರಷ್ಟು ಪರ್ಮಿಷನ್, ಸಿನಿ ಪ್ರಿಯರು ಫುಲ್ ಖುಷ್! ಕೊನೆಗೂ ಬಿಡುಗಡೆಗೊಯಾದ ಚಿನ್ನಮ್ಮನ ಕಂಡು ಅಭಿಮಾನಿಗಳು ಫುಲ್ ಫಿದಾ! ಈಗ ವಾರ್ತೆಗಳ ವಿವರ. ಇತ್ಯಾದಿ ಇತ್ಯಾದಿ... ಇದ್ಯಾವ ಭಾಷೆ – ಯಾರ ಹೆಸರು ಅಂದುಕೊಳ್ಳಬೇಡಿ. ಇವು ನಮ್ಮ ಖಾಸಗಿ ಸುದ್ದಿ ವಾಹಿನಿಗಳು ಪ್ರತಿ ದಿನ ಬಳಸುವ ವಿಚಿತ್ರ ಹೆಸರು ಮತ್ತು ಪದಪ್ರಯೋಗಗಳ ಒಂದು ಝಲಕ್. ಜೈ ಕರ್ನಾಟಕ ಮಾತೆ.

–ಆರ್. ವೀರೇಶ್ ಕುಮಾರ್, ಬೆಂಗಳೂರು

## ಧೈರ್ಯಸ್ಥ ಕನ್ನಡತಿ

ಹೆಣ್ಣುಮಕ್ಕಳಲ್ಲಿ ಧೈರ್ಯ ಪ್ಯಾಂಟ್, ಶರ್ಟ್ ಹಾಕ್ಕೊಳ್ಳೋದರಿಂದ ಬರೋದಲ್ಲ ಅಂತ 'ಕನ್ನಡತಿ'ಯ ಭುವಿ ಪಾತ್ರ ತೋರಿಸಿಕೊಟ್ಟಿದೆ. ಅನ್ಯಾಯ ಕಂಡಾಗ ಪ್ರತಿಭಟಿಸೋದು, ತಪ್ಪು ನಡೆಯುವಾಗ ತಿದ್ದುವುದು, ಗೊಡ್ಡು ಸಂಪ್ರದಾಯವನ್ನ ಮುರಿಯುವುದು, ಇಷ್ಟವಿಲ್ಲದ ಮದುವೆಯನ್ನು ನಯವಾಗಿ ನಿರಾಕರಿಸುವುದು, ಹೀಗೆ ಈ ಪಾತ್ರದ ಮೂಲಕ ಒಬ್ಬ ಧೈರ್ಯಸ್ಥ ಹೆಣ್ಣು ಮಗಳನ್ನ ಚಿತ್ರಿಸಿದ್ದಾರೆ. ನಮಗೆಲ್ಲಾ ತುಂಬಾ ಇಷ್ಟವಾಗಿದೆ. ಮುಂದೆಯೂ ಹೀಗೆಯೇ ಈ ಪಾತ್ರವು ಗಟ್ಟಿತನದಿಂದ ಕೂಡಿರಲಿ.

–ಲಕ್ಷ್ಮಿ, ಚಾಮರಾಜನಗರ